

ಸವೆತದಿಂದ ಮುದುರಿ ಕುಳಿತಾಗ ಮೀನೆಣ್ಣೆಯ ಮಾತ್ರೆಗಳನ್ನು ಸೇವಿಸಬೇಕಾಗುವುದು.

ಮದುವೆ ಸಮಾರಂಭಗಳಲ್ಲಿ ಎಲ್ಲೆಲ್ಲೂ ಎಣ್ಣೆಯದೇ ಭರಾಟೆ. ಅತ್ತ ಕಿಚನ್‌ನಲ್ಲಿ ವಿವಿಧ ಬಗೆಯ ಖಾದ್ಯಗಳು ಎಣ್ಣೆಯಲ್ಲಿ ಮಿಂದೇಳುತ್ತಿದ್ದರೆ, ಬ್ಯಾಚುಲರ್ ಪಾರ್ಟಿ ಎಂದು ಮದುಮಗ, ಅವನ ಗೆಳೆಯರ ಬಳಗ 'ಜೀವನ ಟಾನಿಕ್ ಬಾಟ್ಲಿ ಕುಡಿಯೋ ಮುಂಚೆ ಅಲ್ಲಾಡ್ಸು...' ಎನ್ನುತ್ತಾ ಎಣ್ಣೆ ಹೊಯ್ದುಕೊಂಡು ಅಲ್ಲಾಡುತ್ತಾ ಫುಲ್ ಚಿತ್ತಾಗುವರು. ಇತ್ತ ಹೆಂಗಳೆಯರು ಎಣ್ಣೆ ಶಾಸ್ತ್ರ ಎನ್ನುತ್ತಾ ಅರಿಶಿನ, ಎಣ್ಣೆ ಬೆಣ್ಣೆ ಹಿಡಿದುಕೊಂಡು ಸಡಗರದಿಂದ 'ಬಣ್ಣಿಸಿ ಗೋಪಿ ಹರಸಿದಳು... ಎಣ್ಣೆಯನೊತ್ತುತ ಯದುಕುಲ ತಿಲಕಗೆ...' ಎನ್ನುತ್ತಾ ವಧುವರರಿಗೆ ಮಜ್ಜನ ಮಾಡಿಸಲು ಸಜ್ಜಾದರೆ ಆಹ್ವಾನಿತರೆಲ್ಲಾ 'ಎಣ್ಣೆ ನಿಮ್ದು... ಊಟ ನಮ್ದು...' ಎನ್ನುತ್ತಾ ಅವಸರದಿಂದ ಡೈನಿಂಗ್ ಹಾಲಿನೆಡೆಗೆ ತೆರಳುವರು.

ಹಿಂದೆ ಎಣ್ಣೆಯನ್ನು ಬ್ಯಾನ್ ಮಾಡಬೇಕೆಂದು ಗಲಾಟೆ, ಮುಷ್ಕರ, ಪಾದಯಾತ್ರೆ ಮಾಡುವುದಿತ್ತು. ಆದರಿಂದು ಎಣ್ಣೆ ಏರಿಸಿಯೇ ಪಾದಯಾತ್ರೆ ಮಾಡುವವರಿರುವರು. ಎಲ್ಲಾ ಯಾತ್ರೆ, ಜಾತ್ರೆ, ಕೊನೆಗೆ ಗಣೇಶನ ಮೆರವಣಿಗೆಯಲ್ಲೂ ಎಣ್ಣೆಯದೇ ಅಮಲು, ಘಮಲು. ಇಡೀ ರಾಜ್ಯದ ರಥವೇ ಎಣ್ಣೆಯಿಂದ, ಅದರ ಲಾಭದಿಂದ ಮುನ್ನಡೆಯುತ್ತಿರುವಾಗ 'ಕೌನ್ ತೇಲ್ ಕೋ ಬ್ಯಾನ್ ಕರ್ತಾ ಹೈ...?'

ಒಡವೆಗಳಲ್ಲಿ ಅಲಂಕೃತಗೊಂಡ ಹರಳು, ಮುತ್ತು ರತ್ನ ವಜ್ರ ವೈಢೂರ್ಯಗಳು ಕೆಲವೊಮ್ಮೆ ಎಣ್ಣೆಯ ರುಚಿ ನೋಡಿ ಮಂಕಾಗಿಬಿಡುತ್ತವೆ. ಟ್ಯಾನ್ ಆದ ತ್ವಚೆಯನ್ನು ಡಿಟ್ಯಾನ್ ಮಾಡಲು ಬ್ಯೂಟಿ ಹಟ್‌ಗಳಿಗೆ ತೆರಳಿದಂತೆ ಹರಳುಗಳ ಮೇಲಿನ ಎಣ್ಣೆ ಹೊರತೆಗೆದು ಹೊಳಪು ಮರುಕಳಿಸುವಂತೆ ಮಾಡಲು ಅಕ್ಕಸಾಲಿಗರ ಬಳಿಗೆ ಸಾಗಬೇಕು.

ಹೆಚ್ಚು ಶೀತದ ವಾತಾವರಣ ಇರುವೆಡೆ ಕ್ಯಾಂಪ್ ಫೈರ್ ಹಾಕಿ, ಎಣ್ಣೆ ಏರಿಸಿಕೊಂಡು ಮೈಕೈ ಬೆಚ್ಚಗಾಗಿಸಿಕೊಳ್ಳುವ ರೂಢಿಯಿದೆ. ಕುದುರೆಗಳಿಗೂ ಎಣ್ಣೆ ಏರಿಸಿ ಅವುಗಳ ಶಕ್ತಿ, ವೇಗ ವೃದ್ಧಿಸುವ ಕಸರತ್ತೂ ನಡೆಯುವುದು. 'ಕಪಿಗೆ ಎಣ್ಣೆ ಕುಡಿಸಿದಂತೆ' ಎಂಬ ಹೋಲಿಕೆಯನ್ನು ತಿಕ್ಕಲು ಸ್ವಭಾವದವರಿಗೆ ಬಳಸುವರು.

ಸೆಕ್ಯುರಿಟಿಗಳು ಕಣ್ಣಿಗೆ ಎಷ್ಟೇ ಎಣ್ಣೆ ಬಿಟ್ಟುಕೊಂಡು ಕಾಯ್ದರೂ ಜ್ಯೂವೆಲ್ಲರಿ ಶಾಪು, ಬ್ಯಾಂಕ್‌ಗಳ ದರೋಡೆಯನ್ನು ಹತ್ತಿಕ್ಕಲು ಸಾಧ್ಯವಾಗದಾಗ ಎಲ್ಲೆಡೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವ ಹೊಸ ಬೆಳವಣಿಗೆ ಶುರುವಾಯಿತು. ಕಳ್ಳರು ಚಿನ್ನ–ಬೆಳ್ಳಿಯಂತಹ ಬೆಲೆಬಾಳುವ ವಸ್ತುಗಳನ್ನು ಬಿಟ್ಟು ಎಣ್ಣೆ ಅಂಗಡಿಗೇ ಕನ್ನ ಹಾಕಿ ಬಾಟಲುಗಳನ್ನು ಹೊತ್ತೊಯ್ಯುವ ಬಗ್ಗೆ ಆಸಕ್ತಿ ತೋರಿದಾಗ ಅಲ್ಲೂ ಕ್ಯಾಮೆರಾ ಕಣ್ಣುಗಳು ತೆರೆದುಕೊಂಡವು.

ವಿದೇಶಿ ವಿನಿಮಯದಲ್ಲಿ ತೈಲದ ಆಮದು ಪ್ರಮುಖವಾದುದು. ಇತ್ತೀಚಿನ ದಿನಗಳಲ್ಲಿ ವಿದೇಶವಾಸಿ ಮಕ್ಕಳು ಸ್ವದೇಶಕ್ಕೆ ಬರುವ ಸಮಯ ತರುವ ಉಡುಗೊರೆಗಳ ಪಟ್ಟಿಯಲ್ಲಿ ಹೆಚ್ಚಿನವರು ಎಣ್ಣೆ ಬಾಟಲುಗಳ ಬೇಡಿಕೆ ಇಡುವರು. ಎಷ್ಟೋ ಬಾರಿ ದುಬಾರಿ ವಸ್ತುಗಳಿಂದಾಗದ ಡೀಲ್‌ಗಳು ಎಣ್ಣೆ ಸಮಾರಾಧನೆಯಿಂದ ಕುದುರುವುದಿದೆ. ಬಹುಶಃ ಅದು ಎಣ್ಣೆಯ ಪವರ್!

ಅಡುಗೆ ಅನಿಲ ಪ್ರಚಲಿತವಾಗಿರದ ದಿನಗಳಲ್ಲಿ ಅಡುಗೆ ಇಂಧನವಾಗಿ ಸೀಮೆಎಣ್ಣೆಯೇ ಹೆಚ್ಚಾಗಿ ಬಳಕೆಯಾಗುತ್ತಿತ್ತು. ಸಮಯಕ್ಕೆ ಸರಿಯಾಗಿ ಅದರ ಪೂರೈಕೆಯಾಗದೆ ರಸ್ತೆಯುದ್ದಕ್ಕೂ ಕ್ಯೂ ಸೃಷ್ಟಿಯಾಗಿರುತ್ತಿತ್ತು. ಕೊರೊನಾ ಸಮಯದಿ ಎಣ್ಣೆ ಅಂಗಡಿಯ ಮುಂದೆ ಇಂತಹುದೇ ಸರತಿ ಸಾಲು ಲಿಂಗಭೇದವಿಲ್ಲದ ಕಿಲೋಮೀಟರ್‌ಗಟ್ಟಲೆ ವಿಸ್ತರಿಸಿತ್ತು.



ವಿದ್ಯುತ್ತಿನ ಆವಿಷ್ಕಾರಕ್ಕೆ ಮುನ್ನ ಎಲ್ಲೆಡೆ ಎಣ್ಣೆ ತುಂಬಿದ ಲಾಟೀನು, ಸೀಮೆಎಣ್ಣೆ ಬುಡ್ಡಿಗಳು ಬೆಳಕು ನೀಡುತ್ತಿದ್ದವು. ಕೋಲಿನ ತುದಿಗೆ ಬಟ್ಟೆ ಸುತ್ತಿ ಎಣ್ಣೆ ಹೀರಿಸಿದ ಪಂಜುಗಳು ರಾತ್ರಿಯ ಸಂಚಾರಿ ದೀಪಗಳಾಗಿದ್ದವು.

ಇಂದು ರಸ್ತೆ, ಸಿಟಿ, ಅಂಗಡಿ ಮುಂಗಟ್ಟು ಎಲ್ಲೆಡೆ ವಿದ್ಯುತ್ ದೀಪಗಳು ಜಗಮಗಿಸಿದರೂ ಕ್ಲಬ್ಬು, ಪಬ್ಬುಗಳಲ್ಲಿ ಹಲವರು ಡಿಮ್ ಲೈಟಿನಲ್ಲೇ ವ್ಯವಹರಿಸುತ್ತಾ 'ನಾವ್ ಮನೇಗ್ಹೋಗೋದಿಲ್ಲಾ... ನಮ್ಗೆ ಬಾಗ್ಲು ತೆಗಿಯೋರಿಲ್ಲಾ...' ಎನ್ನುತ್ತಾ ಹನಿ ನೀರಾವರಿಯಲ್ಲಿ (ಡ್ರಿಪ್ ಇರಿಗೇಶನ್) ಮುಳುಗಿ ಹೋಗುವರು.

ಯಾವುದೇ ಎಣ್ಣೆಯ ಸೇವನೆಯೂ ಮಿತಿಯಲ್ಲಿದ್ದರಷ್ಟೇ ಒಳಿತು. ಇಲ್ಲದಿದ್ದರೆ ಕೊಬ್ಬು, ಕೊಲೆಸ್ಟ್ರಾಲ್‌ನೊಂದಿಗೆ ಸ್ಥೂಲಕಾಯಕ್ಕೂ ಎಡೆಮಾಡಿಕೊಡುವುದು. ಕೆಲವೊಂದು ಎಣ್ಣೆಯ ಸೇವನೆ ಮಿತಿಮೀರಿದಾಗ ದೇಹದೊಂದಿಗೆ ಜೇಬನ್ನೂ ಸುಡುವುದು. ಕಡೆಗೆ ಸಮಾಜದಿಂದ, ಕುಟುಂಬದಿಂದ ಅವಹೇಳನಕ್ಕೆ ಗುರಿಯಾಗಿ 'ಖಾಲಿ ಕ್ವಾಟ್ರು ಬಾಟ್ಲೆ ಹಂಗೆ ಲೈಫು... ಆಚೆಗ್ ಹಾಕೋಳೆ ವೈಫು...' ಎನ್ನುತ್ತಾ ಫುಟ್‌ಪಾತ್‌ನಲ್ಲೇ ಪವಡಿಸಬೇಕಾಗುವುದು.

'ದೀಪದ ಬೆಳಕಿನಲ್ಲಿ ಒಬ್ಬ ಭಾಗವತ ಓದಬಹುದು. ಇನ್ನೊಬ್ಬ ಕಳ್ಳತನ ಮಾಡಬಹುದು. ಇದರಿಂದ ದೀಪಕ್ಕೆ ಏನೂ ಕಳಂಕವಿಲ್ಲ' ಎಂಬಂತೆ ಎಣ್ಣೆಯ ಬಳಕೆ ಅವರವರ ವಿವೇಚನೆಗೆ ಬಿಟ್ಟದ್ದು. ಯಾವುದೋ ಎಣ್ಣೆ ಒಂದು ಮನೆಯ ದೀಪವನ್ನು ನಂದಿಸಿದರೆ ಮತ್ತಾವುದೋ ಎಣ್ಣೆ ಒಂದು ಮನೆಯ ನಂದಾದೀಪವೂ ಆಗಬಹುದು.

ಪ್ರತಿಕ್ರಿಯಿಸಿ: **feedback@sudha.co.in**